<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.</u>

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ : 01.12.2022
ಪಾಟಿ ಸವಾಲು : ಪ್ರತಿವಾದಿ ಪರ ಶ್ರೀ ಎನ್.ಕೆ.ಎಸ್. ವಕೀಲರಿಂದ

ದಾವಾ ಸ್ವತ್ತು ನನ್ನ ಪಿತ್ರಾರ್ಜಿತ ಸ್ವತ್ತಾಗಿರುತ್ತದೆ. ನನ್ನ ತಂದೆ ದಾವಾ ಸ್ವತ್ತನ್ನು ಸೊಬಗೇಗೌಡ, ಕುಳ್ಳೇಗೌಡ ಹಾಗೂ ದಾಸೇಗೌಡ ರವರಿಂದ ಕ್ರಯ ಪತ್ರದ ಮುಖೇನ ಖರೀದಿ ಮಾಡಿರುತ್ತಾರೆ. ದಾವಾ ಸ್ವತ್ತು ಸ.ನಂ.1003/2 ನೇ ಪೋಡಿಗೆ ಸೇರಿದ ಜಮೀನಾಗಿರುತ್ತದೆ. ಸದರಿ ಸ್ವತ್ತಿನಲ್ಲಿ 26 ಗುಂಟೆ ವಿಸ್ತೀರ್ಣದ ಜಮೀನು ಇರುತ್ತದೆ. ನನ್ನ ತಂದೆ ಖರೀದಿ ಮಾಡಿದ ವಿಚಾರಕ್ಕೆ ಸಂಬಂಧಿಸಿದಂತೆ ದಾಖಲೆ ಹಾಜರುಪಡಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ದಕ್ಷಿಣಕ್ಕೆ ಇರುವ ರಸ್ತೆ 20 ಅಡಿ ವಿಸ್ತೀರ್ಣ ಇದೆ ಎಂದು ನುಡಿಯುತ್ತಾರೆ.

ನಮ್ಮ ಮನೆಯ ಹಿಂಭಾಗ ರಸ್ತೆ ಇದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿದ್ದೇನೆ. ನಮ್ಮ ಮನೆಯ ಹಿಂಭಾಗ ಪೂರ್ವ ಪಶ್ಚಿಮವಾಗಿ ಸುಮಾರು 6 ಮನೆಗಳು ಬರುತ್ತವೆ. ಸದರಿ ಮನೆಗಳು ದಾಸಪ್ಪ, ನಂಜಪ್ಪ, ಮುದುಕೇಗೌಡರ ಖಾಲಿ ಜಾಗ, ಕೆಂಗೇಗೌಡರ ಮಗ ವಿಶ್ವೇಶ್ವರ ಮನೆ, ಕೆಂಪಾಜ್ಜಮ್ಮನ ಮನೆ ಇರುತ್ತದೆ. ನಮ್ಮ ಮನೆಯ ಪೂರ್ವ ಸುತ್ತಲೂ ಯಾವುದೇ ಜಾಗ ಬಿಡದೇ ಕಾಂಪೌಂಡ್ ಹಾಕಿದ್ದೇವೆ ಎಂದರೆ ಸುಳ್ಳು. ನನ್ನ ಮನೆಯ ದಕ್ಷಿಣದ ಬಾಜುವಿನಲ್ಲಿ ಗಲ್ಲಿಗೆ ಜಾಗ ಬಿಟ್ಟಿದ್ದೀರಾ ಎಂದರೆ ಸಾಕ್ಷಿಯು ನನಗೆ ಸೇರಿದ ಇನ್ನೂ 25 ಅಡಿ ಜಾಗ ಅಲ್ಲಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ದಕ್ಷಿಣ ದಿಕ್ಕಿಗೆ ನಮ್ಮದೇ ಉಳಿಕೆ 25 ಅಡಿ ಜಾಗ ಇರುವ ಬಗ್ಗೆ ವಾದ ಪತ್ರದ ತಪಶೀಲಿನಲ್ಲಿ ಬರೆಸಿದ್ದೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಅದರ ಅವಶ್ಯಕತೆ ಇಲ್ಲವೆಂದು ನುಡಿಯುತ್ತಾರೆ.

ದಾವಾ ಸ್ವತ್ತಿನ ಉತ್ತರ ದಿಕ್ಕಿನಲ್ಲಿ ನಾನು ಪೂರ್ವ-ಪಶ್ಚಿಮಃ 110 ಅಡಿ, ಉತ್ತರ-ದಕ್ಷಿಣಃ 48 ಅಡಿ ವಿಸ್ತೀರ್ಣದ ಗೋಡನ್ ಕಟ್ಟಿದ್ದೇವೆ ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ಮಾನ್ಯ ಪ್ರತಿವಾದಿ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟಿ ಸವಾಲಿಗಾಗಿ ಸಮಯಾವಕಾಶ ಕೋರಿದ್ದು ನೀಡಲಾಗಿದೆ)

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.